ಚಿತ್ರಗಳ ಮೊಬೈಲ್‌ನಲ್ಲಿ ತೋರಿಸಿದ. ಫಾರಿನ್ ಜನ ನನಗಾಗಿ ಕಾಯುತ್ತಾರೆ ಎಂದು ಒದರಿದ. ಇವನು ಹಿಂಗೇ ರೈಲು ಬಿಡುತ್ತಾನೆ. ಎಲ್ಲದಕ್ಕೂ ಹ್ಞೂ ಎಂದು ಬಿಡಿ ಸರ್. ಅವನ ಮೈಮೇಲೆ ಎಳೆದುಕೊಳ್ಳಲು ಹೋಗಬೇಡಿ ಎಂದು ಮೊದಲೇ ಶಶಿ ಸೂಚನೆ ಕೊಟ್ಟಿದ್ದರು. ಕಾರಣ ನಾನು ಕೆಲ ಸಮಯ ಇಂಥವರ ಮಾತನ್ನು ವ್ಯಂಗ್ಯ ಮಾಡಲು ಹೋಗಿ ತಮಾಷೆ ಹೋಗಿ ಅಮಾಸೆ ಆಗಿದ್ದಿದೆ. ಫೋಟೊ ಪಯಣದಲ್ಲಿ ಇಂತಹ ಅನೇಕ ಟಾರ್ಚರ್ ನ್ಯಾಚುರಲಿಸ್ಟ್‌ಗಳ ನಾಲಿಗೆ ದಾಳಿಗೆ ನಾವು ಸಿಕ್ಕಿಬಿದ್ದು ಅಭ್ಯಾಸವಾಗಿದೆ. ಸರಿ ನಡೆಯಪ್ಪ ಎಂದು ಅವನ ವಿಧೇಯಕರಂತೆ ಹೆಜ್ಜೆ ಹಾಕಿದೆವು. ಮೊದಲು ಆತ ಅರಣ್ಯ ಇಲಾಖೆಯವರ ಒಂದು ಪಾರ್ಕಿಗೆ ಕರೆದುಕೊಂಡು ಹೋದ. ಹಗಲಲ್ಲಿ ಕಾಣದ ಅನೇಕ ಸಂಗತಿಗಳು ಅಲ್ಲಿ ರಾತ್ರಿ ತೆರೆದುಕೊಳ್ಳುತ್ತಿದ್ದವು.

ಹಿಮದಲ್ಲಿ ನುಗ್ಗಿ ಹೋಗುತ್ತಿದ್ದೆವು. ಅದು ಕಾದಿಟ್ಟ ಅರಣ್ಯ ಪ್ರದೇಶ. ಆ ಜಾಗೆಯ ಒಟ್ಟು ಸನ್ನಿವೇಶ ‘ಜುರಾಸಿಕ್ ಪಾರ್ಕ್’ ಸಿನಿಮಾವನ್ನು ನೆನಪಿಗೆ ತರುತ್ತಿತ್ತು. ಮಳೆ ಬಿದ್ದ ಮೇಲೆ ಚಿಗಿತು ನಿಂತ ಎಲ್‌ಕೆಜಿ ವಯಸ್ಸಿನ ಇಂಬಳದ ಮರಿಗಳು ದಾಳಿ ಮಾಡಲು ಶುರು ಮಾಡಿದ್ದವು. ಅದು ತಕ್ಷಣಕ್ಕೆ ಗೊತ್ತೇ ಆಗಲಿಲ್ಲ. ಅನುಮಾನ ಬಂದು ಟಾರ್ಚು ಕಾಲಿನ ಕಡೆ ತಿರುಗಿಸಿದಾಗ ಸಂಪೂರ್ಣ ರಕ್ತಮಯ. ಯಾವ ನೋವು ಇಲ್ಲದೆ ರಕ್ತ ಸರಾಗವಾಗಿ ಹರಿಯುತ್ತಿತ್ತು. ಒಂದು ಗಂಟೆಯಲ್ಲಿ ಆ ಮರಿಗಳು ಶಕ್ತಿಮೀರಿ ತಮ್ಮ ಹೊಟ್ಟೆ ತುಂಬಿಸಿಕೊಂಡು ಇಳಿದು ಹೋಗಿದ್ದವು. ಚಡಪಡಿಸುವ ದಾರಿ ಬಿಟ್ಟು ನಮ್ಮ ಬಳಿ ಮತ್ತೇನೂ ಇರಲಿಲ್ಲ. ಎದುರಿಗೆ ಸಿಗುತ್ತಿದ್ದ ಬಣ್ಣದ ಕಪ್ಪೆಗಳು, ಬಣ್ಣದ ಹಾವುಗಳು, ಚೆಂದದ ಕಪ್ಪೆ ಮರಿಗಳ ಚಿತ್ರದ ಎದುರು ನಮ್ಮ ರಕ್ತಪಾತದ ಖಬರೇ ಇರಲಿಲ್ಲ. ಒಳ್ಳೆಯ ಚಿತ್ರಗಳು ಸಿಗುವಾಗ ಮುಳ್ಳು ತರಚುವುದು, ಜಾರಿ ಬಿದ್ದು ಮುಖಮೂತಿ ಕೆತ್ತಿಕೊಳ್ಳುವುದು, ಮೈ ಕೈ ಕೆಸರಾಗುವುದು ಅಷ್ಟು ಮುಖ್ಯ ಎನಿಸುವುದಿಲ್ಲ. ಒಟ್ಟಿನಲ್ಲಿ ನಮ್ಮ ಕೊರಳಿನ ನೇತಾಡುವ ಕ್ಯಾಮೆರಾಗೆ ಯಾವುದೇ ಜಖಂ ಆಗಬಾರದು. ರಭಸವಾಗಿ ಬೀಸುವ ಗಾಳಿ, ನಡುವೆ ಸುಳಿವ ಮಳೆಯ ಹೊಡೆತದ ಜೊತೆಗೆ, ಪದೇಪದೇ ಕಾಲಿಗೆ ಹತ್ತಿ ನಿಂತು ರಕ್ತವನ್ನು ಸಾಲ ಕೇಳುವ ಇಂಬಳಗಳ ಹಟಮಾರಿತನವನ್ನು ಒಪ್ಪಿಕೊಂಡು ಎಡೆಬಿಡದೆ ಸುತ್ತಾಡಿ ಮಲಬಾರ್ ಗ್ಲೈಡಿಂಗ್ ಕಪ್ಪೆಯ ಮರಿಯನ್ನು ಹುಡುಕಿದೆವು. ಗ್ಲೈಡಿಂಗ್ ಕಪ್ಪೆಯ ಅಪ್ಪ ಅಮ್ಮನ ಹುಡುಕುವುದು ಕಷ್ಟವಲ್ಲ. ಮರಿ ನಮ್ಮ ಕಣ್ಣಿಗೆ ಸಿಕ್ಕಿಬೀಳುವುದೇ ವಿಶೇಷ. ‘ಹಪ್ಪಟ್ಟೆ ಹಾವು’ ಎಂದು ಕರೆಯಲಾಗುವ ಬಣ್ಣಬಣ್ಣದ ಮಲಬಾರ್

